**2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ನಂಜನಗೂಡು**

**ಸಿ.ಸಿ. ಸಂಖ್ಯೆ: 1741/2018**

ಫಿರ್ಯಾದಿ : ಎಂ ಕೆ ನಾಗರಾಜು ಬಿನ್ ಕೆಂಚೇಗೌಡ, 43 ವರ್ಷ,
ನಂ.29, ಹೊಸ ನೀರಿನ ಟ್ಯಾಂಕ್ ಹತ್ತಿರ ,
ರಾಮನಾಥನ್ ಲೇಔಟ್ , ನಂಜನಗೂಡು ಪಟ್ಟಣ .

ವಿರುದ್ಧ

ಆರೋಪಿ : ನದೀಮ್ ಪಾಷಾ ಬಿನ್ ಇಕ್ಬಾಲ್ , 30 ವರ್ಷ ,
ಬಿ ಡಿ ಓ ಸರ್ಕಲ್ ಹತ್ತಿರ , ಚಾಮಲಾಪುರ ಹುಂಡಿ
ನಂಜನಗೂಡು .
ಕೆಲಸ ಮಾಡುವ ವಿಳಾಸ
ನದೀಮ್ ಪಾಷಾ ಬಿನ್ ಇಕ್ಬಾಲ್
ಜುಬಿಲಿಯಂಟ್ ಜನರಿಕ್ ಕಾರ್ಖಾನೆ ,
ಇಂಡಸ್ಟ್ರೀಯಲ್ ಏರಿಯಾ ನಂಜನಗೂಡು .

: ಆರೋಪಣೆ :

ವಿನುತಾ.ಡಿ.ಎಸ್ ಬಿ.ಎಸ್‌ಸಿ (ಸೆರಿ), ಎಲ್‌ಎಲ್‌ಬಿ 2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ನಂಜನಗೂಡು, ಆದ ನಾನು ನಿಮ್ಮ ಮೇಲೆ ಈ ಕೆಳಕಂಡ ಆಪಾದನೆಯನ್ನು ಹೊರೆಸುವುದೇನೆಂದರೇ:

ಮೇಲ್ಕಂಡ ಆರೋಪಿಯಾದ ನೀವು ಮತ್ತು ಫಿರ್ಯಾದುದಾರರು ಪರಿಚಯಸ್ಥರು ಹಾಗೂ ಸ್ನೇಹಿತರಾಗಿದ್ದು, ಸದರಿ ಪರಿಚಯದ ಆಧಾರದ ಮೇಲೆ ಆರೋಪಿಯಾದ ನೀವು ನಿಮ್ಮ ದರದು ನಿಮಿತ್ತ ಅಂದರೆ ಗೃಹ ಕೃತ್ಯದ ಖರ್ಚಿಗೆ ಹಾಗೂ ಕೈಸಾಲಗಳನ್ನು ತೀರಿಸುವುದಕ್ಕೂ ಮತ್ತು ಇತರೆ ಖರ್ಚಿಗಾಗಿ ಹಣದ ಅವಶ್ಯಕತೆ ಇದೆ ಎಂದು ಫಿರ್ಯಾದುದಾರರನ್ನು 2018 ನೇ ಇಸವಿ ಡಿಸೆಂಬರ್ ತಿಂಗಳಲ್ಲಿ ಭೇಟಿ ಮಾಡಿ ರೂ.1,20,000/- ಗಳನ್ನು ಮುಬ್ಬೈ ಸಾಲವಾಗಿ ಪಡೆದುಕೊಂಡು, ಸದರಿ ಸಾಲವನ್ನು 3 ತಿಂಗಳೊಳಗಾಗಿ ಪಾವತಿಸುವುದಾಗಿ ಒಪ್ಪಿ ಸದರಿ ಮೊಬಲಗನ್ನು ಮರುಪಾವತಿ ಮಾಡದೇ ಇದ್ದಾಗ ಫಿರ್ಯಾದುದಾರರು ಹಣವನ್ನು ಹಿಂತಿರುಗಿಸುವಂತೆ ಕೇಳಿಕೊಂಡಾಗ ಆರೋಪಿಯಾದ ನೀವು ನಿಮ್ಮ ಉಳಿತಾಯ ಖಾತೆ ಹೊಂದಿರುವ ಐಸಿಐಸಿಐ ಬ್ಯಾಂಕ್, ನಂಜನಗೂಡು ಶಾಖೆಯ ಚೆಕ್ ನಂ 015578 ಕ್ಕೆ ರೂ.1,20,000/- ಗಳನ್ನು ದಿನಾಂಕ: 02.04.2018

ಎಂದು ನಮೂದಿಸಿ ಫಿರ್ಯಾದುದಾರರ ಹೆಸರಿಗೆ ನೀಡಿದ್ದು, ತದನಂತರ ಪಿರ್ಯಾದುದಾರರು ಸದರಿ ಚೆಕ್ಕನ್ನು ನಗದೀಕರಿಸಿಕೊಳ್ಳಲು ತಮ್ಮ ಉಳಿತಾಯ ಖಾತೆಯಿರುವ ಕೆನರಾ ಬ್ಯಾಂಕ್, ನಂಜನಗೂಡು ಶಾಖೆಯ ಬ್ಯಾಂಕಿನ ಮೂಲಕ ಹಾಜರುಪಡಿಸಿದಾಗ ಸದರಿ ಬ್ಯಾಂಕಿನವರು ಆರೋಪಿಯಾದ ನಿಮ್ಮ ಖಾತೆಯಲ್ಲಿ "ಸಾಕಷ್ಟು ಹಣವಿಲ್ಲ" ಎಂಬ ಹಿಂಬರಹದೊಂಗೆ ದಿಃ 10.04.2018 ರಂದು ನಗಧೀಕೃತಗೊಳ್ಳದೆ ತಿರಸ್ಕೃತಗೊಂಡಿರುತ್ತದೆ ಎಂದು ತಿಳಿಸಿರುತ್ತಾರೆ. ಅನಂತರ ಪಿರ್ಯಾದುದಾರರು ಮೇಲ್ಕಂಡ ವಿಷಯವನ್ನು ನಮೂದಿಸಿ ವಕೀಲರ ಮೂಲಕ ನಿಮಗೆ ದಿ.02.05.2018 ರಂದು ನೋಟಿಸನ್ನು ಕಳುಹಿಸಿದ್ದು, ಸದರಿ ನೋಟೀಸ್ ಜಾರಿಯಾಗಿದ್ದು, ಈ ಸಂಬಂಧ ನೀವು ಯಾವುದೇ ಕ್ರಮ ಕೈಗೊಳ್ಳದೇ ಇದ್ದುದರಿಂದ ಆರೋಪಿಯಾದ ನೀವು ನೀವು ವರ್ಗಾವಣೆ ಲಿಖಿತ ಅಧಿನಿಯಮ ಕಲಂ 138 ರಡಿಯಲ್ಲಿ ದಂಡನೀಯವಾದ ಅಪರಾದವನ್ನು ಈ ನ್ಯಾಯಾಲಯದ ಸಜ್ಞಾಯಲ್ಲಿ ಎಸಗಿರುವಿರೆಂದು ನಿಮ್ಮ ಮೇಲೆ ಅಪಾದಿಸಲಾಗಿದೆ.

ಪ್ರಶ್ನೆ-1 : ಈಗ ಓದಿ ಹೇಳಿದ ನಿಮ್ಮ ಮೇಲಿನ ಆಪಾದನೆಯನ್ನು ಕೇಳಿದ್ದೀರಾ?

ಉತ್ತರ : ಕೇಳಿಸಿಕೊಂಡೆ.

ಪ್ರಶ್ನೆ-2 : ಸದರೀ ಆಪಾದನೆಗಳನ್ನು ಒಪ್ಪಿಕೊಳ್ಳುವೆಯೋ? ಅಥವಾ ಪ್ರತಿರಕ್ಷೆ ಮಾಡಿಕೊಳ್ಳುವಿರೋ ?

ಉತ್ತರ : ತಪ್ಪು ಮಾಡಿಲ್ಲ. ವಿಚಾರಣೆಯಾಗಲಿ.

(ಮೇಲ್ಕಂಡ ಆಪಾದನೆಯನ್ನು ಆರೋಪಿತನಿಗೆ ಕನ್ನಡದಲ್ಲಿ ಓದಿ ಹೇಳಿ ನಂತರ ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನೊಳಗೊಂಡಿದೆಯೆಂದು ದಿನಾಂಕ 03.03.2020 ರಂದು ತೆರೆದ ನ್ಯಾಯಾಲಯದಲ್ಲಿ ದೃಢೀಕರಿಸುತ್ತೇನೆ).

3/3/20

2ನೇ ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.
ನಂಜನಗೂಡು